**DW-2:** ವೀರಾಚಾರಿ

ದಿನಾಂಕಃ **20.08.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಪ್ರತಿವಾದಿ ಪರವಾಗಿ ಶ್ರೀ ಪಿ.ವಿ.ವೈ. ವಕೀಲರಿಂದಃ**

ನಾನು ಮುಖ್ಯ ವಿಚಾರಣೆ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದ್ದು ಅವುಗಳನ್ನು ನಾನೇ ಹೇಳಿ ಬರೆಯಿಸಿರುತ್ತೇನೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ಈ ದಿನ ನಾನು ಹಾಜರುಪಡಿಸಿರುವ ದಾಖಲೆಗಳನ್ನು ನಿಶಾನೆಯಾಗಿ ಪರಿಗಣಿಸಲಾಗಿ ಪ್ರಾರ್ಥಿಸುತ್ತೇನೆ.

ಉಯಿಲನ್ನು ಗೋಪಾಲರೆಡ್ಡಿ ರವರು ಬರವಣಿಗೆ ಮಾಡಿರುತ್ತಾರೆ. ಉಯಿಲನ್ನು ಲಕ್ಷ್ಮೀದೇವಮ್ಮ ರವರು ತನ್ನ ಸೊಸೆಗೆ ಬರೆದುಕೊಟ್ಟಿರುತ್ತಾರೆ. ಉಯಿಲು ಬರೆಯುವ ಸಂದರ್ಭದಲ್ಲಿ ಲಕ್ಷ್ಮೀದೇವಮ್ಮ, ನಾನು ಮತ್ತು ಮತ್ತೊಬ್ಬ ಸಾಕ್ಷಿ ಇದ್ದೇವು. ನಿಡಿ.3 ಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಡಿ.3(ಎ) ಎಂದು ಗುರುತಿಸಲಾಯಿತು. ಉಯಿಲಿನಲ್ಲಿ ಲಕ್ಷ್ಮಮ್ಮ ರವರು ಎಡಗೈ ಹೆಬ್ಬೆಟ್ಟನ್ನು ಮಾಡಿದ್ದು ಅದನ್ನು ನಾನು ಗುರುತಿಸುತ್ತೇನೆ. ಈಗ ನನಗೆ ತೋರಿಸಿದ ಎಡಗೈ ಹೆಬ್ಬೆರಳಿನ ಗುರುತು ಲಕ್ಷ್ಮಮ್ಮ ರವರದ್ದಾಗಿರುತ್ತದೆ. ಸದರಿ ಹೆಬ್ಬೆರಳಿನ ಗುರುತನ್ನು ನಿಡಿ.3(ಬಿ) ಎಂದು ಗುರುತಿಸಲಾಯಿತು. ಆ ದಿನ ನನ್ನೊಂದಿಗೆ ಸಣ್ಣಾಯಪ್ಪ ರವರು ಸಹ ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ. ಸಣ್ಣಯಪ್ಪ ರವರ ಸಹಿಯನ್ನು ನಿಡಿ.3(ಸಿ) ಎಂದು ಗುರುತಿಸಲಾಯಿತು. ಸಣ್ಣಯಪ್ಪ ಸಹಿ ಮಾಡುವಾಗ ನಾನು, ಗೋಪಾಲರೆಡ್ಡಿ ಮತ್ತು ಲಕ್ಷ್ಮಮ್ಮ ರವರು ಇದ್ದೇವು.

(ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಮುಂದೂಡಲಾಯಿತು)

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

Sd/-

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.